KACM210011822021

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ರವರ ನ್ಯಾಯಾಲಯ, ಕಡೂರು.**

**ಉಪಸ್ಥಿತರು**

**ಶ್ರೀಮತಿ.ಸವಿತರಾಣಿ ಹೆಚ್.ವಿ.** ಬಿ.ಎ.ಎಲ್, ಎಲ್‌ಎಲ್.ಬಿ.,

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಕಡೂರು.

**ದಿನಾಂಕ 18 ನೇ ಜುಲೈ 2023**

**ಅಸಲು ದಾವಾ ಸಂಖ್ಯೆ: 229/2021**

**ವಾದಿ** : 1. ಶ್ರೀ ಗೋಪಿ ಹೆಚ್.ಸಿ., ಬಿನ್ ಚಂದ್ರಪ್ಪ,
ಸುಮಾರು 27 ವರ್ಷ, ವ್ಯವಸಾಯಗಾರರು,

2. ಶ್ರೀನಿವಾಸ ಸಿ., ಬಿನ್ ಚಂದ್ರಪ್ಪ,
ಸುಮಾರು 26 ವರ್ಷ, ವ್ಯವಸಾಯಗಾರರು,

ಇಬ್ಬರ ವಾಸ: ನಾಗಪ್ಪ ಕಾಲೋನಿ, 1 ನೇ ಕ್ರಾಸ್,
ತರೀಕೆರೆ ಟೌನ್, ತರೀಕೆರೆ ತಾಲ್ಲೂಕು.

**(ಪ್ರತಿನಿಧಿಸುವವರು: ಶ್ರೀ ಟಿ.ಜೆ.ಜಗದೀಶ್., ವಕೀಲರು)**

**-ವಿರುದ್ದ-**

**ಪ್ರತಿವಾದಿಗಳು :** 1.ಶ್ರೀಮತಿ ಕರಿಯಮ್ಮ,
ಕೋಂ. ಲೇಟ್ ನರಸಪ್ಪ,
ಸುಮಾರು 87 ವರ್ಷ, ವ್ಯವಸಾಯ,
ವಾಸ : ಹೋರಿತಿಮ್ಮನಹಳ್ಳಿ,
ಬೀರೂರು ಹೋಬಳಿ, ಕಡೂರು ತಾಲ್ಲೂಕು.

2.ಶ್ರೀಮತಿ ಹನುಮಂತಮ್ಮ,
ಬಿನ್ ಲೇಟ್ ನರಸಪ್ಪ,
ಕೋಂ ಚಂದ್ರಪ್ಪ,
ಸುಮಾರು 65 ವರ್ಷ,
ವ್ಯವಸಾಯಗಾರರು,
ವಾಸ : ಶಂಕರಪುರ ಗ್ರಾಮ,
ಸಿಂಗಟಗೆರೆ ಹೋಬಳಿ,

ಕಡೂರು ತಾಲ್ಲೂಕು.

3.ಶ್ರೀಮತಿ ರತ್ನಮ್ಮ,
ಬಿನ್ ಲೇಟ್ ನರಸಪ್ಪ,
ಕೋಂ ಕುಳ್ಳಪ್ಪ,
ಸುಮಾರು 60 ವರ್ಷ,
ವ್ಯವಸಾಯಗಾರರು,
ವಾಸ : ಬಾವಿಕೆರೆ ಗ್ರಾಮ,
ಲಕ್ಕವಳ್ಳಿ ಹೋಬಳಿ,
ತರೀಕೆರೆ ತಾಲ್ಲೂಕು.

4. ಚಂದ್ರಪ್ಪ, ಬಿನ್ ಲೇಟ್ ನರಸಪ್ಪ,
ಸುಮಾರು 54 ವರ್ಷ, ವ್ಯವಸಾಯಗಾರರು,
ವಾಸ : ಹೋರಿತಿಮ್ಮನಹಳ್ಳಿ,
ಬೀರೂರು ಹೋಬಳಿ,
ಕಡೂರು ತಾಲ್ಲೂಕು.

5. ಶ್ರೀಮತಿ ನಾಗಮ್ಮ, ಬಿನ್ ಲೇಟ್ ನರಸಪ್ಪ,
ಕೋಂ ಮಂಜಪ್ಪ, ಸುಮಾರು 45 ವರ್ಷ,
ವ್ಯವಸಾಯಗಾರರು, ವಾಸ ಚುರ್ಚಿಗುಂಡಿ,
ಅಂಜನಾಪುರ ಹೋಬಳಿ,
ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

6. ಶ್ರೀಮತಿ ಶೈಲಾ ಸಿ., ಕೋಂ ಗೋವಿಂದಸ್ವಾಮಿ ಎನ್.
ಸುಮಾರು 33 ವರ್ಷ, ವ್ಯವಸಾಯಗಾರರು,
ವಾಸ : ಜೋಡಿತಿಮ್ಮಾಪುರ ಗ್ರಾಮ,
ಬೀರೂರು ಹೋಬಳಿ,
ಕಡೂರು ತಾಲ್ಲೂಕು.

7. ಪುಟ್ಟರಾಜು, ಬಿನ್ ರಾಜಪ್ಪ,
ಸುಮಾರು 37 ವರ್ಷ, ವ್ಯವಸಾಯ,
ವಾಸ : ಹೋರಿತಿಮ್ಮನಹಳ್ಳಿ,
ಬೀರೂರು ಹೋಬಳಿ,
ಕಡೂರು ತಾಲ್ಲೂಕು.

8. ರಮೇಶ್, ಬಿನ್ ರಾಜಪ್ಪ,

ಸುಮಾರು 35 ವರ್ಷ, ವ್ಯವಸಾಯಗಾರರು,
ವಾಸ ಃ ಹೋರಿತಿಮ್ಮನಹಳ್ಳಿ,
ಬೀರೂರು ಹೋಬಳಿ, ಕಡೂರು ತಾಲ್ಲೂಕು.
**(1 ರಿಂದ 6 ನೇ ಪ್ರತಿವಾದಿ ಪರ ಶ್ರೀ ಟಿ. ಗೋವಿಂದಸ್ವಾಮಿ,ವಕೀಲರು**
**7 ಮತ್ತು 8 ನೇ ಪ್ರತಿವಾದಿ ಪರ ಶ್ರೀ ಹೆಚ್.ತಿಪ್ಪೇಶ್)**

**ಃ ಮಧ್ಯಂತರ ಅರ್ಜಿ ಸಂಖ್ಯೆಃ 1**

**ಅರ್ಜಿದಾರರುಃ** ಶ್ರೀ ಗೋಪಿ ಹೆಚ್.ಸಿ. ಮತ್ತು ಇತರರು

**-ವಿರುದ್ದ-**

**ಎದುರುದಾರರುಃ** ಶ್ರೀಮತಿ ಕರಿಯಮ್ಮ ಮತ್ತು ಇತರರು

**ಃ ಮಧ್ಯಂತರ ಅರ್ಜಿ ಸಂಖ್ಯೆ - 1 ರ ಮೇಲಿನ ಆದೇಶ ಃ**

ಪ್ರಸ್ತುತ ಈ ಮಧ್ಯಂತರ ಅರ್ಜಿ-1 ನ್ನು ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ರೀತ್ಯಾ ಸಲ್ಲಿಸಿ, ಪ್ರತಿವಾದಿಗಳಾಗಲಿ ಅಥವಾ ಅವರ ಪ್ರತಿನಿಧಿಗಳಾಗಲಿ, ಏಜೆಂಟರಾಗಲಿ, ಅವರ ಇತರೆ ಯಾವುದೇ ವ್ಯಕ್ತಿಗಳಾಗಲಿ, ದಾವಾ ಆಸ್ತಿಯನ್ನು ಯಾರಿಗೂ ಮಾರಾಟ / ಪರಭಾರೆ, ಬ್ಯಾಂಕುಗಳಿಗೆ ಆಧಾರ ಮಾಡದಂತೆ ತಾತ್ಕಾಲಿಕ ಪ್ರತಿಬಂಧಕಾಜ್ಞೆಯ ಆದೇಶವನ್ನು ನೀಡಬೇಕೆಂದು ಕೋರಿರುತ್ತಾರೆ.

2. ಪ್ರಸ್ತುತ ಮಧ್ಯಂತರ ಅರ್ಜಿ-1 ಕ್ಕೆ ಪೂರಕವಾಗಿ 2 ನೇ ವಾದಿಯು ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆಃ-

ದಾವಾ ಷೆಡ್ಯೂಲ್ ಸ್ವತ್ತುಗಳ ಖಾತೆಯು 1, 6, 7 ಮತ್ತು 8 ನೇ ಪ್ರತಿವಾದಿಯರ ಹೆಸರಿನಲ್ಲಿ ಇದ್ದು, ಇದನ್ನು ದುರುಪಯೋಗಪಡಿಸಿಕೊಂಡು ಸದರಿ 1, 6, 7 ಮತ್ತು 8 ನೇ ಪ್ರತಿವಾದಿಯರು ಸದರಿ ಆಸ್ತಿಯನ್ನು ಬೇರೆಯವರಿಗೆ ಕ್ರಯಪತ್ರ, ವಿಲ್, ದಾನಾಪತ್ರ ಇತರೆ ಪತ್ರಗಳ ಮೂಲಕ ಪರಭಾರೆ ಮಾಡುವ

ಸಾಧ್ಯತೆ ಇದ್ದು ಹಾಗೂ ಬ್ಯಾಂಕ್ ಗಳಿಗೆ ಆಧಾರ ಮಾಡಿ ಸಾಲ ಪಡೆಯುವ ತರಾತುರಿಯಲ್ಲಿದ್ದು, ಒಂದು ವೇಳೆ ಹಾಗೇನಾದಾರೂ 1, 6, 7 ಮತ್ತು 8 ನೇ ಪ್ರತಿವಾದಿಯರು ಸದರಿ ಸ್ವತ್ತನ್ನು ಬೇರೆಯವರಿಗೆ ಪರಭಾರೆ ಮಾಡಿದರೆ ಮತ್ತು ಬ್ಯಾಂಕ್ ಗಳಿಗೆ ಆಧಾರ ಮಾಡಿ ಸಾಲ ಪಡೆದರೆ ತನಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಮತ್ತು ತಾನು ದಾವೆಯನ್ನು ಸಲ್ಲಿಸಿದ ಉದ್ದೇಶ ಈಡೇರದಂತೆ ಆಗುತ್ತದೆ. ಒಂದು ವೇಳೆ ತಮ್ಮ ಪರವಾಗಿ ಆದೇಶಿಸಿದಲ್ಲಿ ಎದರುದಾರರಿಗೆ ಯಾವುದೇ ತರನಾದ ಹಾನಿಯಾಗಲಿ, ನಷ್ಟವಾಗಲಿ ಉಂಟಾಗುವುದಿಲ್ಲ. ಆದ್ದರಿಂದ ತಾನು ನ್ಯಾಯಾಲಯಕ್ಕೆ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯು  ಶಾಶ್ವತ ಪ್ರತಿಬಂದಕಾಜ್ಞೆ ಪರಿಹಾರ ಪಡೆಯುವ ಸಲುವಾಗಿ ಪ್ರತಿವಾದಿಗಳ ವಿರುದ್ಧ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ನೀಡಬೇಕೆಂದು ಕೋರಿರುತ್ತೇನೆ. ಒಂದು ವೇಳೆ ತಾನು ಈ ಅರ್ಜಿಯಲ್ಲಿ ಕೇಳಿರುವಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಪ್ರತಿವಾದಿಗಳ ವಿರುದ್ಧ ನೀಡದೆ ಇದ್ದರೆ ತನಗೆ ತುಂಬಲಾರದ ನಷ್ಟ ಮತ್ತು ಅನ್ಯಾಯವಾಗುತ್ತದೆಂದು ವಾದಿಯು ತನ್ನ ಮಧ್ಯಂತರ ಅರ್ಜಿ-1 ರ ಪ್ರಮಾಣ ಪತ್ರದಲ್ಲಿ ಪ್ರಾರ್ಥಿಸಿಕೊಂಡಿರುತ್ತಾರೆ.

3. ಎಂಟನೇ ಪ್ರತಿವಾದಿ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ.1 ಕ್ಕೆ ತಮ್ಮ ಪರ ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ 7 ಮತ್ತು 8 ನೇ ಪ್ರತಿವಾದಿಗಳು ಕಡೂರು ತಾಲ್ಲೂಕು, ಬೀರೂರು ಹೋಬಳಿ, ಹೋರಿತಿಮ್ಮನಹಳ್ಳಿ ಗ್ರಾಮದ ಸರ್ವೆ ನಂಬರ್.16/P7, ಹೊಸ ನಂಬರ್.16 ರಲ್ಲಿ 2 ಎಕರೆ 20 ಗುಂಟೆ ಜಮೀನಿನ ಕಾನೂನುಬದ್ಧ ಸ್ವಾಧೀನವನ್ನು ಹೊಂದಿ ಅನುಭವಿಸಿಕೊಂಡು ಬರುತ್ತಿದ್ದು, 2 ಎಕರೆ 20 ಗುಂಟೆ ಪೈಕಿ 1 ಎಕರೆ ಜಮೀನನ್ನು 7 ನೇ ಪ್ರತಿವಾದಿಯು, ಉಳಿದ 1 ಎಕರೆ 20  ಗುಂಟೆ ಜಮೀನನ್ನು 8 ನೇ ಪ್ರತಿವಾದಿಯು ಖಾತೆಯನ್ನು ಹೊಂದಿದ್ದು, ಸದರಿ ಸ್ವತ್ತುಗಳಿಗೆ ನಿರುಪಾದಿಕ ಮಾಲೀಕರೆಂದು ತಿಳಿಸಿರುತ್ತಾರೆ.

ಮುಂದುವರೆದು ಸರ್ವೆ ನಂಬರ್.16/P ರಲ್ಲಿ ಒಟ್ಟು 5 ಎಕರೆ ಜಮೀನು ಸರ್ಕಾರಕ್ಕೆ ಸೇರಿದ್ದು, ಸದರಿ ಸರ್ಕಾರವು Depressed Class Rules

No.22/1954-55 ರ ಅಡಿಯಲ್ಲಿ ಪರಿಶಿಷ್ಟ ಜಾತಿಯಡಿ ಕೊರಚ ಜಾತಿಗೆ ಸೇರಿದ ಶ್ರೀಮತಿ ಗಂಗಮ್ಮ, ಬಿನ್ ರಾಮಯ್ಯನವರಿಗೆ ಸದರಿ ಸ್ವತ್ತನ್ನು ಮಂಜೂರು ಮಾಡಲಾಗಿರುತ್ತದೆ.

ನಂತರ ಸದರಿ 5 ಎಕರೆ ಆಸ್ತಿಯಲ್ಲಿ ಶ್ರೀಮತಿ ಗಂಗಮ್ಮ ಬಿನ್ ರಾಮಯ್ಯ ಮತ್ತು ರಾಜಪ್ಪನವರು ಸೇರಿ 2 ಎಕರೆ 20 ಗುಂಟೆ ಆಸ್ತಿಯನ್ನು ದಿನಾಂಕಃ 10.04.1975 ರಲ್ಲಿ SR No.3805/1974-75 ರಂತೆ **ನಂಜಪ್ಪ, ಬಿನ್ ತಿಮ್ಮಯ್ಯನವರಿಗೆ** ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಮತ್ತು ಉಳಿದ 2 ಎಕರೆ 20 ಗುಂಟೆಯನ್ನು ದಿನಾಂಕಃ10.04.1975 ರಲ್ಲಿ SR No.3806/1974-75 ರಂತೆ **ಹನುಮಂತಪ್ಪ ಬಿನ್ ಗೋವಿಂದಪ್ಪನಿಗೆ** ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟವು PTCL ಕಾಯ್ದೆಯ ಉಲ್ಲಂಘನೆ ಆಗಿರುತ್ತದೆ. ಆದ್ದರಿಂದ ರಾಜಪ್ಪನವರ ಮಗನಾದ ಧರಣಿಕುಮಾರ್ ಎಂಬುವವರು ತರೀಕೆರೆಯ ಸಹಾಯಕ ಆಯುಕ್ತರ ಮುಂದೆ PTCL Act ನಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಶ್ರೀಮತಿ ಗಂಗಮ್ಮನವರ ಹೆಸರಿನಲ್ಲಿದ್ದ ಆಸ್ತಿಯನ್ನು ಮರುಸ್ಥಾಪಿಸುವಂತೆ SC/ST Case No.5/2006-07 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ. ತರೀಕೆರೆಯ ಸಹಾಯಕ ಆಯುಕ್ತರು ದಿನಾಂಕಃ 02.12.2009 ರಂದು ಸದರಿ ಅರ್ಜಿಯನ್ನು ಪುರಸ್ಕರಿಸಿ, ಆದೇಶವನ್ನು ಮಾಡಿ ಶ್ರೀಮತಿ ಗಂಗಮ್ಮನವರ ಹೆಸರಿಗೆ ಆಸ್ತಿಯನ್ನು ಪುನರ್ ಸ್ಥಾಪಿಸುವಂತೆ ಆದೇಶಿಸಿದ್ದರ ಮೇರೆಗೆ ಶ್ರೀಮತಿ ಗಂಗಮ್ಮನವರ ಹೆಸರಿಗೆ ಪುನರ್ ಸ್ಥಾಪಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ನಂತರ ಸದರಿ ಧರಣಿಕುಮಾರ್ ರವರು 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಕಡೂರು ಇಲ್ಲಿ ಅಸಲು ದಾವಾ ಸಂಖ್ಯೆ.390/2016 ರಂತೆ ತನ್ನ ತಂದೆ, ಸಹೋದರಿ ಶ್ರೀಮತಿ ಯಶೋಧ, ಶ್ರೀಮತಿ ಪುಷ್ಪ ಮತ್ತು ಸಹೋದರ ಪುಟ್ಟರಾಜು ಮತ್ತು ರಮೇಶ (7 ಮತ್ತು 8 ನೇ ಪ್ರತಿವಾದಿ)ರವರ ವಿರುದ್ಧ ಸರ್ವೆ ನಂಬರ್.16 ರಲ್ಲಿರುವ 2 ಎಕರೆ 20 ಗುಂಟೆ ಜೊತೆಗೆ ಉಳಿದ ಆಸ್ತಿಯಲ್ಲಿ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ದಾವೆಯನ್ನು ಹಾಕಿದ್ದು, ನಂತರ ಸದರಿ

ದಾವೆಯಲ್ಲಿ ದಿನಾಂಕಃ28.10.2016 ರಂದು ಲೋಕಾದಲತ್ ನಲ್ಲಿ ರಾಜಿ ಅರ್ಜಿಯನ್ನು ಸಲ್ಲಿಸಿ ರಾಜಿ ಮಾಡಿಕೊಂಡಿದ್ದು, ಸದರಿ ರಾಜಿಯಂತೆ ನ್ಯಾಯಾಲಯವು ಡಿಕ್ರಿ ಮಾಡಿರುತ್ತದೆ. ಸದರಿ ರಾಜಿಯಂತೆ ಸರ್ವೆ ನಂಬರ್.16 ರಲ್ಲಿರುವ ಆಸ್ತಿಯ ಪೈಕಿ 1 ಎಕರೆ 7 ನೇ ಪ್ರತಿವಾದಿಗೆ, 1 ಎಕರೆ 20 ಗುಂಟೆ ಆಸ್ತಿಯು 8 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿದ್ದು, ಅದರಂತೆ ಖಾತೆ ಬದಲಾವಣೆಯಾಗಿರುತ್ತದೆ. ಅದರಂತೆ 7 ಮತ್ತು 8 ನೇ ಪ್ರತಿವಾದಿಗಳು ನಿರುಪಾಧಿಕ ಮಾಲೀಕರಾಗಿದ್ದು ಸ್ವಾಧೀನದಲ್ಲಿರುತ್ತಾರೆ. ಆದರೆ ಸದರಿ ಸ್ವತ್ತಿನ ಮೇಲೆ ವಾದಿಯರು ಮತ್ತು 1 ರಿಂದ 6 ನೇ ಪ್ರತಿವಾದಿಯರಿಗೆ ದಾವಾ ಸ್ವತ್ತು ಐಟಂ ನಂಬರ್.2 ರ ಮೇಲೆ ಯಾವುದೇ ರೀತಿಯ ಹಕ್ಕು ಮತ್ತು ಹಿತಾಸಕ್ತಿ ಇಲ್ಲದಿದ್ದರೂ ಸಹಾ ಪ್ರತಿವಾದಿ 7 ಮತ್ತು 8 ರವರ ಮೇಲೆ ದಾವೆಯನ್ನು ತಂದಿರುವುದು ಊರ್ಜಿತವಲ್ಲ ಮತ್ತು ವಾದಿಯು ಮಧ್ಯಂತರ ಪರಿಹಾರ ಪಡೆಯಲು ಅರ್ಹನಲ್ಲವಾದ್ದರಿಂದ ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

4. ಪ್ರತಿವಾದಿ 1 ರಿಂದ 6 ರವರ ಪರ ವಕೀಲರು ಮಧ್ಯಂತರ ಅರ್ಜಿ-1 ಕ್ಕೆ ತಮ್ಮ ಪರ ತಕರಾರುಗಳನ್ನು ಸಲ್ಲಿಸಿರುವುದಿಲ್ಲ.

5. ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ನ್ಯಾಯಾಲಯದ ಗಮನಕ್ಕೆ ಈ ಕೆಳಕಂಡ ಅಂಶಗಳು ಪರಿಶೀಲನೆಗೆ ಉದ್ಭವಿಸಿರುತ್ತವೆ.

1)ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ಹೊಂದಿರುತ್ತೇನೆಂಬುದನ್ನು ವಾದಿಯು ರುಜುವಾತು ಪಡಿಸುತ್ತಾರೆಯೇ?

2) ಅನುಕೂಲತೆಯ ಒಲವು ತನ್ನ ಪರವಾಗಿ ಇರುತ್ತದೆ ಎಂಬುದನ್ನು ವಾದಿಯು ರುಜುವಾತುಪಡಿಸುತ್ತಾರೆಯೇ?

3)ಒಂದು ವೇಳೆ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ನೀಡದೆ ಇದ್ದಲ್ಲಿ ತನಗೆ ತುಂಬಲಾರದ ನಷ್ಟಂಟಾಗುವ ಸಂಭವವಿರುತ್ತದೆ ಎಂಬುದನ್ನು ವಾದಿಯು ರುಜುವಾತುಪಡಿಸುತ್ತಾರೆಯೇ?

4) ಯಾವ ಆದೇಶ?

7. ನ್ಯಾಯಾಲಯದ ಮುಂದಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು ಅದರಂತೆ ಮೇಲ್ಕಂಡ ಅಂಶಗಳಿಗೆ ಉತ್ತರಃ-

ಅಂಶ ನಂ.1 ಃ ಸಕರಾತ್ಮಕವಾಗಿ

ಅಂಶ ನಂ.2 ಃ ಭಾಗಶಃ ಸಕರಾತ್ಮಕವಾಗಿ

ಅಂಶ ನಂ.3 ಃ ಭಾಗಶಃ ಸಕರಾತ್ಮಕವಾಗಿ

ಅಂಶ ನಂ.4 ಃ ಅಂತಿಮ ಆದೇಶದಂತೆ, ಈ ಕೆಳಕಂಡ

## ಕಾ ರ ಣ ಗ ಳು

8. **ಅಂಶ ಸಂಖ್ಯೆ. 1:- ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಃ** ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡುವ ಪ್ರಮುಖ ಉದ್ದೇಶವು ಪಕ್ಷಗಾರರಿಗೆ ನೀಡುವಂತಹ ಕಾನೂನುಬದ್ಧ ಹಕ್ಕುಗಳು ಮತ್ತು ಸದರಿ ಹಕ್ಕುಗಳನ್ನು ಸಂಬಂಧಿಸುವ ವ್ಯಾಜ್ಯಗಳು ಸಂಪೂರ್ಣವಾಗಿ ತೀರ್ಮಾನವಾಗುವವರೆಗೆ ಸ್ವತ್ತನ್ನು ಯಾಥಾಸ್ಥಿತಿಯಲ್ಲಿ ಕಾಪಾಡುವುದು. ತಾತ್ಕಾಲಿಕ ನಿರ್ಭಂಧಕಾಜ್ಞೆ ಅರ್ಜಿಯನ್ನು ತೀರ್ಮಾನಿಸುವಾಗ, ನ್ಯಾಯಾಲಯವು ಸದರಿ ನಿರ್ಭಂಧಕಾಜ್ಞೆ ಆದೇಶವನ್ನು ನೀಡಿರುವುದರಿಂದ ಯಾವ ರೀತಿಯ ಪರಿಣಾಮಗಳು ಪಕ್ಷಗಾರರ ಮೇಲಿನ ಹಿತಾಸಕ್ತಿಯ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ ಎಂಬುದನ್ನು

ಪರಿಗಣಿಸುವುದು ಅವಶ್ಯವಾಗಿರುತ್ತದೆ. ತಾತ್ಕಾಲಿಕ ನಿರ್ಭಂಧಕಾಜ್ಞೆ ಆದೇಶವು ನ್ಯಾಯಸಮ್ಮತವಾದ ಪರಿಹಾರವಾಗಿದ್ದು, ಸದರಿ ಪರಿಹಾರವನ್ನು ನೀಡುವುದು ನ್ಯಾಯಾಲಯದ ವಿವೇಚನಾತ್ಮಕವಾದ ಅಧಿಕಾರವಾಗಿರುತ್ತದೆ. ಆದರೆ ಸದರಿ ವಿವೇಚನಾತ್ಮಕ ಅಧಿಕಾರವನ್ನು ನ್ಯಾಯಾಲಯವು ನಿರಂಕುಶ ರೀತಿಯಲ್ಲಿ ಚಲಾಯಿಸುವಂತಹದ್ದಾಗಿರುವುದಿಲ್ಲ.

9. ಅಂದರೆ ನ್ಯಾಯಾಲಯವು ತಾತ್ಕಾಲಿಕ ನಿರ್ಭಂಧಕಾಜ್ಞೆ ನೀಡಬೇಕಾದರೆ ವಾದಿಯು ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸಿರುವರೇ? ಈ ನ್ಯಾಯಾಲಯವು ವಾದಿಯು ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ನ್ಯಾಯಾಲಯಕ್ಕೆ ತಂದಿರುತ್ತಾರೆಯೇ ಎನ್ನುವ ಅಂಶವನ್ನು ಪರಿಗಣಿಸಲು ಮುಂದಾಗಿರುತ್ತದೆ.

10. ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆ ಎಂದರೆ ನ್ಯಾಯಾಲಯಕ್ಕೆ ವಾದಿಯು ತಂದಿರುವ ವ್ಯಾಜ್ಯದಲ್ಲಿ ತಿರುಳಿದ್ದು, ಸದರಿ ವ್ಯಾಜ್ಯವನ್ನು ಸದುದ್ದೇಶದಿಂದ ಮಾಡಿದ್ದು, ವಾದಿಯ ವ್ಯಾಜ್ಯವು ವಿಚಾರಣೆಗೆ ಯೋಗ್ಯವಾಗಿದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾಗಬೇಕಾಗುತ್ತದೆ. ಮುಂದುವರಿದು, ವಾದಿಯು ಈ ನ್ಯಾಯಾಲಯದಿಂದ ಅಂತಿಮ ಪರಿಹಾರವನ್ನು ಪಡೆದುಕೊಳ್ಳುವ ಸಂಭವವಿರುತ್ತದೆ ಎನ್ನುವ ವಿಚಾರವು ಸಹ ಮೊದಲ ನೋಟಕ್ಕೆ ಕಾಣಿಸಬೇಕಾಗಿರುವುದು ಅವಶ್ಯವಿರುತ್ತದೆ. ಅಂದರೆ ವಾದಿಯು ಮೊದಲ ನೋಟಕ್ಕೆ ಹಕ್ಕು ತನ್ನ ಪರವಾಗಿದ್ದು ಸದರಿ ಮೊದಲ ನೋಟದ ಹಕ್ಕನ್ನು ಪ್ರತಿವಾದಿಯರು ವ್ಯತಿಕ್ರಮಣ ಮಾಡಿದ್ದಾರೆಂದು ನ್ಯಾಯಾಲಯದ ಗಮನಕ್ಕೆ ಬಂದರೆ ನ್ಯಾಯಾಲಯವು ವಾದಿಯರ ಪರವಾಗಿ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬಹುದಾಗಿರುತ್ತದೆ. ಈ ಹಂತದಲ್ಲಿ ವಾದಿಯರು ತನ್ನ ಪರವಾಗಿ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ ಇದೆ ಎನ್ನುವುದನ್ನು ಈ ಹಂತದಲ್ಲಿ ತೋರ್ಪಡಿಸುವ ಹೊಣೆಗಾರಿಕೆ ವಾದಿಯರ ಮೇಲಿರುತ್ತದೆ. ಈ ನ್ಯಾಯಾಲಯವು ಸ್ಪಷ್ಟಪಡಿಸುವುದೇನೆಂದರೆ, ಈ ಹಂತದಲ್ಲಿ ನ್ಯಾಯಾಲಯವು ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ಮಾತ್ರ ಪರಿಶೀಲಿಸುತ್ತಿದ್ದು, ಪಕ್ಷಗಾರರ ಮೊದಲ ನೋಟದ ಸ್ವಾಮ್ಯವನ್ನಲ್ಲ (ಒಡೆತನ). ಈ ಹಂತದಲ್ಲಿ ನ್ಯಾಯಾಲಯವು ದೀರ್ಘವಾದ ವಿಚಾರಣೆಯನ್ನು

ಮಾಡುವುದು ನಿಷಿದ್ಧವಾಗಿದ್ದು ಪಕ್ಷಗಾರರ ದಾವಾ ಆಸ್ತಿ ಮತ್ತು ಪ್ರತಿವಾದಿಯ ಆಸ್ತಿಗಳ ಮೇಲಿನ ಸ್ವಾಮ್ಯದ (ಒಡೆತನ) ಬಗ್ಗೆಯೇ ಚರ್ಚಿಸುವ ಹಾಗಿಲ್ಲ. ಈ ಮೂಲತತ್ವದಡಿಯಲ್ಲಿ ಈ ಮೊಕದ್ದಮೆಯ ಸನ್ನಿವೇಶವನ್ನು ನೋಡುವುದಾದರೆ, ವಾದಿಯರು ಈ ದಾವೆಯನ್ನು ದಾವಾ ಅಸ್ತಿಗಳಲ್ಲಿ ತನ್ನ ಪಾಲಿನ ಹಿಸ್ಸಾ ಹಕ್ಕನ್ನು ಘೋಷಣಾತ್ಮಕ ಡಿಕ್ರಿಯೊಂದಿಗೆ ಘೋಷಿಸಿ ಪ್ರತ್ಯೇಕ ಸ್ವಾಧೀನವನ್ನು ವಹಿಸಿಕೊಡಬೇಕೆಂದು ನ್ಯಾಯಾಲಯಕ್ಕೆ ಬಂದಿರುತ್ತಾರೆ.

11. ವಾದಿಯರ ವಾದ ಪತ್ರದ ಪ್ರಕಾರ, ದಾವಾ ಸ್ವತ್ತು ವಾದಿಯರ ಪಿತ್ರಾರ್ಜಿತ ಆಸ್ತಿ ಎಂದು ಹೇಳಿಕೊಂಡಿರುತ್ತಾರೆ. 8 ನೇ ಪ್ರತಿವಾದಿಯು ವಾದಿಯರ ವಾದವನ್ನು ಗಂಭೀರವಾಗಿ ವಿರೋಧಿಸಿ ವಾದಿಯರು ದಾವಾ ಸ್ವತ್ತಿನ ಐಟಂ ನಂ.2 ರ ಮಾಲೀಕರಲ್ಲ, ದಾವಾ ಸ್ವತ್ತಿನ ಐಟಂ ನಂ.2 ಕ್ಕೂ ವಾದಿಯರಿಗೂ ಮತ್ತು 1 ರಿಂದ 6 ನೇ ಪ್ರತಿವಾದಿಯರಿಗೂ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲವೆಂದು ನಿರ್ಧಿಷ್ಟವಾದ ನಿಲುವನ್ನು ವ್ಯಕ್ತಪಡಿಸಿರುತ್ತಾರೆ. ಈ ಅರ್ಜಿಯ ಸಂಗತಿಗಳು ಪರಸ್ಪರ ತದ್ವಿರುದ್ಧವಾಗಿದ್ದರೂ ಕೂಡ ದಾವಾ ಅಸ್ತಿಗಳು ಮೂಲತಃ ವಾದಿಯರ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದು, ವಾದಿಯರ ಮತ್ತು 1 ರಿಂದ 5 ನೇ ಪ್ರತಿವಾದಿಗಳಿಗೆ ಹಿಸ್ಸೆಯ ಹಕ್ಕಿರುತ್ತದೆ ಎಂದು ತಿಳಿಸಿದ್ದು, ಸದರಿ ವಿಚಾರಕ್ಕೆ ಸಂಬಂಧಿಸಿದಂತೆ 1 ರಿಂದ 6 ನೇ ಪ್ರತಿವಾದಿಯರು ತಮ್ಮ ಪರ ಯಾವುದೇ ತಕರಾರುಗಳನ್ನು ಸಲ್ಲಿಸದೇ ಇರುವುದರಿಂದ, ದಾವಾ ಆಸ್ತಿ ಐಟಂ -1 ರಲ್ಲಿ ಒಟ್ಟು 2 ಎಕರೆ 30 ಗುಂಟೆಗಳ ಪೈಕಿ 1 ಎಕರೆ 6 ಗುಂಟೆಯು 6 ನೇ ಪ್ರತಿವಾದಿಯ ಹೆಸರಿನಲ್ಲಿದ್ದು, ಉಳಿದ ಐಟಂ ನಂಬರ್ -1 ರ ಜಮೀನು ಮತ್ತು 3 ರಿಂದ 5 ಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿರುವುದರಿಂದ ಹಾಗೂ ದಾವಾ ಐಟಂ ನಂಬರ್ -2, ಏಳು ಮತ್ತು ಎಂಟನೇ ಪ್ರತಿವಾದಿಗಳ ಹೆಸರಿನಲ್ಲಿರುವುದು ಕಂಡುಬಂದಿರುತ್ತದೆ. ಉಭಯ ಪಕ್ಷಗಾರರ ನಡುವೆ ಇರುವಂತಹ ವಿವಾದವನ್ನು ಅಧಿವಿಚಾರಣೆಯ ಹಂತದಲ್ಲಿ ಪರಿಹಾರ ಕಂಡುಕೊಳ್ಳಬಹುದಾಗಿರುತ್ತದೆ. ಆದ್ದರಿಂದ ಈ ದಾವೆಯು ನಿರ್ಣಯಕ್ಕೆ ಅರ್ಹವಾಗಿರುತ್ತದೆ. ಹೀಗಾಗಿ, ವಾದಿಯರು ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ತಂದಿರುತ್ತಾರೆ. ಆದ್ದರಿಂದ **ಅಂಶ ಸಂಖ್ಯೆ 1 ನ್ನು ಸಕಾರಾತ್ಮಕವಾಗಿ** ಉತ್ತರಿಸುತ್ತದೆ.

**12. <u>ಅಂಶ ಸಂಖ್ಯೆ 2</u> ಃ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರದ ಅರ್ಜಿಯಲ್ಲಿ ವಾದಿಯು ದಾವೆಯಲ್ಲಿನ ಅನುಕೂಲತೆಯ ಒಲವು ತನ್ನ ಪರವಾಗಿ ಇದೆಯೇ? ಮತ್ತು ಅರ್ಜಿಯನ್ನು ವಜಾಗೊಳಿಸುವುದರಿಂದ ತನಗೆ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ? ಎಂಬುದನ್ನು ನಿರೂಪಿಸಬೇಕಾಗಿರುತ್ತದೆ.** ಪ್ರಸ್ತುತ ಪ್ರಕರಣದಲ್ಲಿ ವಾದಿಯು ತನ್ನ ಅರ್ಜಿಯಲ್ಲಿ ದಾವಾ ಷೆಡ್ಯೂಲ್ ಸ್ವತ್ತುಗಳ ಖಾತೆಯು 1, 6, 7 ಮತ್ತು 8 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇದ್ದು, ಇದನ್ನು ದುರುಪಯೋಗಪಡಿಸಿಕೊಂಡು ಸದರಿ 1, 6, 7 ಮತ್ತು 8 ನೇ ಪ್ರತಿವಾದಿಯರು ಸದರಿ ಆಸ್ತಿಗಳನ್ನು ಬೇರೆಯವರಿಗೆ ಕ್ರಯಪತ್ರ , ದಾನಪತ್ರವನ್ನು ಇತರೆ ಪತ್ರಗಳ ಮೂಲಕ ಪರಭಾರೆ ಮಾಡುವ ಸಾಧ್ಯತೆ ಇದ್ದು ಹಾಗೂ ಬ್ಯಾಂಕುಗಳಿಗೆ ಆಧಾರ ಮಾಡಿ ಸಾಲಪಡೆಯುವ ತರಾತುರಿಯಲ್ಲಿದ್ದು, ಒಂದು ವೇಳೆ ಹಾಗೇನದರೂ 1, 6, 7 ಮತ್ತು 8 ನೇ ಪ್ರತಿವಾದಿಯರು ಸದರಿ ಸ್ವತ್ತನ್ನು ಬೇರೆಯವರಿಗೆ ಪರಭಾರೆ ಮಾಡಿದರೆ, ಬ್ಯಾಂಕುಗಳಿಗೆ ಆಧಾರ ಮಾಡಿ ಸಾಲ ಪಡೆದರೆ ತನಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎಂದು ತಿಳಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ವಾದಿಯರು ಸಲ್ಲಿಸಿರುವಂತಹ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದಾವಾ ಆಸ್ತಿಗಳ ಪೈಕಿ ದಾವಾ ಆಸ್ತಿ ಐಟಂ -1 ರಲ್ಲಿ ಒಟ್ಟು 2 ಎಕರೆ 30 ಗುಂಟೆಗಳ ಪೈಕಿ 1 ಎಕರೆ 6 ಗುಂಟೆಯು 6 ನೇ ಪ್ರತಿವಾದಿಯ ಹೆಸರಿನಲ್ಲಿದ್ದು, ಉಳಿದ ಐಟಂ ನಂಬರ್ -1 ರ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದು ಮತ್ತು ಐಟಂ ನಂಬರ್ 3 ರಿಂದ 5 ಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿರುವುದರಿಂದ ಹಾಗೂ ದಾವಾ ಐಟಂ ನಂಬರ್ -2, ಏಳು ಮತ್ತು ಎಂಟನೇ ಪ್ರತಿವಾದಿಗಳ ಹೆಸರಿನಲ್ಲಿರುವುದು ಕಂಡುಬಂದಿರುತ್ತದೆ. ಪ್ರತಿವಾದಿಯ ಪರ ವಕೀಲರು ತಮ್ಮ ತಕರಾರಿನಲ್ಲಿ ದಾವಾ ಐಟಂ ನಂಬರ್ -2 ಕ್ಕೂ ವಾದಿಯರಿಗೂ ಮತ್ತು ಪ್ರತಿವಾದಿ -1 ರಿಂದ 6 ರವರಿಗೂ ಯಾವುದೇ ಸಂಬಂಧವಿರುವುದಿಲ್ಲವೆಂದು ತಮ್ಮ ತಕರಾರಿನಲ್ಲಿ ತಿಳಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನೂ ಹಾಜರುಪಡಿಸಿದ್ದು ಅವುಗಳನ್ನು ಪರಿಶೀಲಿಸಿದಾಗ, ದಾವಾ ಆಸ್ತಿ ಐಟಂ ನಂಬರ್ -2, ಗಂಗಮ್ಮ ಕೋಂ ರಾಮಯ್ಯನವರ ಹೆಸರಿನಲ್ಲಿದ್ದು ಸದರಿ ಆಸ್ತಿಯನ್ನು ಶ್ರೀಮತಿ ಗಂಗಮ್ಮನವರಿಗೆ ಸರ್ಕಾರವು depressed class Rules No.22/1954-55 ರಡಿಯಲ್ಲಿ ಪರಿಶಿಷ್ಟ

ಜಾತಿಗೆ ಸೇರಿದ ವ್ಯಕ್ತಿಗಳಿಗೆ ನೀಡಿದ ಆಸ್ತಿಯಾದ್ದರಿಂದ ಶ್ರೀಮತಿ ಗಂಗಮ್ಮನವರು ಸದರಿ ಆಸ್ತಿಯನ್ನು ನಂಜಪ್ಪ ಮತ್ತು ಹನುಮಂತಪ್ಪನವರಿಗೆ ಮಾರಾಟ ಮಾಡಿದ್ದು, ನಂತರ ಮಾರಾಟವನ್ನು ರಾಜಪ್ಪನವರ ಮಗ ಧರಣೀಕುಮಾರ ತರೀಕೆರೆಯ ಸಹಾಯಕ ಆಯುಕ್ತರ ಮುಂದೆ PTCL Act ನಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಮರುಸ್ಥಾಪಿಸುವಂತೆ SC/ST Case No.5/2006-07 ರಂತೆ ಪ್ರಕರಣವನ್ನು ದಾಖಲಿಸಿ ತರೀಕೆರೆಯ ಸಹಾಯಕ ಆಯುಕ್ತರು ದಿನಾಂಕ 02.12.2009 ರಂದು ಸದರಿ ಅರ್ಜಿಯನ್ನು ಪುರಸ್ಕರಿಸಿ ಗಂಗಮ್ಮನವರ ಹೆಸರಿಗೆ ಆಸ್ತಿಯನ್ನು ಪುನರ್ ಸ್ಥಾಪಿಸುವಂತೆ ಆದೇಶಿಸಿರುತ್ತಾರೆ. ನಂತರ ಧರಣೀಕುಮಾರ್ ರವರು 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಕಡೂರು - ರವರಲ್ಲಿ ಅಸಲು ದಾವಾ ಸಂಖ್ಯೆಃ 390/2016 ರಂತೆ ತನ್ನ ತಂದೆ, ಸಹೋದರಿ, ಸಹೋದರರ ನಡುವೆ ವಿಭಾಗ ಮತ್ತು ಪ್ರತ್ಯೇಕ ಸ್ವಾ ಧೀನ ಕೋರಿ ದಾವೆ ಸಲ್ಲಿಸಿದ್ದು, ದಿನಾಂಕ 28.10.2016 ರಂದು ಲೋಕ್ ಅದಾಲತ್ ನಲ್ಲಿ ರಾಜಿ ಮಾಡಿಕೊಂಡಿದ್ದು, ಸದರಿ ಡಿಕ್ರಿಯಂತೆ ಸರ್ವೇ ನಂಬರ್ 16 ರಲ್ಲಿರುವ ಆಸ್ತಿ 2 ಎಕರೆ 20 ಗುಂಟೆ ಪೈಕಿ 1 ಎಕರೆ ಪುಟ್ಟರಾಜುವಿಗೆ (ಈ ದಾವೆಯ 7 ನೇ ಪ್ರತಿವಾದಿಗೆ) ಮತ್ತು 1 ಎಕರೆ 20 ಗುಂಟೆಯನ್ನು ರಮೇಶ್ (8 ನೇ ಪ್ರತಿವಾದಿ ) ಹಿಸ್ಸೆಗೆ ಬಂದಿದ್ದು ಅದರಂತೆ ಖಾತೆಯಾಗಿರುತ್ತದೆ ಎಂದು ತಿಳಿಸಿ ಇದಕ್ಕೆ ಪೂರಕವಾಗಿ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

13. ಅದರಂತೆ ದಾವಾ ಐಟಂ ನಂಬರ್ 1 ರಲ್ಲಿ ಒಟ್ಟು 2 ಎಕರೆ 30 ಗುಂಟೆಗಳ ಪೈಕಿ 1 ಎಕರೆ 6 ಗಂಟೆಯನ್ನು 6 ನೇ ಪ್ರತಿವಾದಿಗೆ, 1 ರಿಂದ 4 ನೇ ಪ್ರತಿವಾದಿಯರು ಸೇರಿ 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದು ದಾಖಲೆಯನ್ನು ಹಾಜರುಪಡಿಸಿದ್ದು, ಉಳಿದ ದಾವಾ ಆಸ್ತಿಗಳಾದ 1, 3 ರಿಂದ 5 ರ ಆಸ್ತಿಗಳು 1 ಮತ್ತು 6 ನೇ ಪ್ರತಿವಾದಿಯ ಹೆಸರಿನಲ್ಲಿರುವುದನ್ನು ದುರುಪಯೋಗಪಡಿಸಿಕೊಂಡು ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುತ್ತಾರೆಂದು ತಿಳಿಸಿ, ತಮ್ಮ ವಾದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. 1, 3 ರಿಂದ 5 ರಆಸ್ತಿಗಳು 1 ಮತ್ತು 6 ನೇ ಪ್ರತಿವಾದಿಯ ಹೆಸರಿನಲ್ಲಿರುವುದನ್ನು ಅಂತಿಮವಾಗಿ ತೀರ್ಮಾನವಾಗುವವರೆಗೆ, ಬೇರೆಯವರಿಗೆ ಪರಭಾರೆ ಮಾಡಿದರೆ ವಾದಿಯರಿಗೆ ತುಂಬಲಾರದ ನಷ್ಟ ಮತ್ತು

ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆ ಎಂದು ಈ ದಾವೆಯ ಅನುಕೂಲತೆ ಒಲವು ವಾದಿಯರ ಪರ ಭಾಗಶಃವಾಗಿರುತ್ತದೆ ಎಂದು ಸ್ಪಷ್ಟವಾಗುತ್ತದೆ. ಆದ್ದರಿಂದ **ಅಂಶ ಸಂಖ್ಯೆ 2 ನ್ನು ಭಾಗಶಃ ಸಕಾರಾತ್ಮಕವಾಗಿ** ಉತ್ತರಿಸುತ್ತದೆ.

**14.** **<u>ಅಂಶ ಸಂಖ್ಯೆ 3</u> ಃ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಃ** ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ವಾದಿಯರು ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯು ತಮ್ಮ ಪರವಾಗಿದೆ ಎನ್ನುವುದನ್ನು ತೋರಿಸುವುದರ ಜೊತೆಗೆ ಅನುಕೂಲತೆಯ ಒಲವು ತಮ್ಮ ಪರವಾಗಿದೆ ಎಂದು ನಿರೂಪಿಸಬೇಕಾಗುತ್ತದೆ. ಜೊತೆಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ತಮ್ಮ ಪರವಾಗಿ ನೀಡದಿದ್ದರೆ ತಮಗೆ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆ ಎಂದು ನಿರೂಪಿಸುವುದು ಅವಶ್ಯವಾಗುತ್ತದೆ. ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಎಂದರೆ, ವಾದಿಯರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡದೆ ಹೋದರೆ ಅವರಿಗಾಗುವ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯನ್ನು ಹಣದ ರೂಪದಲ್ಲಾಗಲೀ ಅಥವಾ ಇನ್ನಾವುದೇ ರೂಪದಲ್ಲಾಗಲೀ ಸರಿಪಡಿಸಲಾಗದು ಎನ್ನುವ ಸಂದರ್ಭವಿದ್ದರೆ, ಅಂತಹ ಸಂದರ್ಭವನ್ನು ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಎಂದು ಹೇಳಬಹುದು. ಈ ನ್ಯಾಯಾಲಯವು ಒಂದು ಮತ್ತು ಎರಡನೇ ಅಂಶಗಳನ್ನು ಚರ್ಚಿಸುವ ಕಾಲಕ್ಕೆ ವಾದಿಯರ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸಿದ್ದರೂ ಕೂಡ ಅನುಕೂಲತೆಯ ಒಲವು ತಮ್ಮ ಪರವಾಗಿದೆ ಭಾಗಶಃವಾಗಿರುತ್ತದೆ ಎನ್ನುವ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ಸದರಿ ಮೂರು ನಿಯಮಗಳಲ್ಲಿನ ಮೂರನೇ ನಿಯಮವಾದ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯು ವಾದಿಯರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದೆ ಇರುವುದರಿಂದ ಆಗುತ್ತದೆಯೇ ಅಥವಾ ಇಲ್ಲವೇ ಎಂಬುದು ಪ್ರಸ್ತುತವಾಗಿ ನಿರ್ಣಯಿಸತಕ್ಕಂತಹ ಅಂಶವಾಗಿರುತ್ತದೆ. ಅದರಂತೆ ದಾವಾ ಐಟಂ ನಂಬರ್ 1 ರಲ್ಲಿ ಒಟ್ಟು 2 ಎಕರೆ 30 ಗುಂಟೆಗಳ ಪೈಕಿ 1 ಎಕರೆ 6 ಗಂಟೆಯನ್ನು 6 ನೇ ಪ್ರತಿವಾದಿಗೆ, 1 ರಿಂದ 4 ನೇ ಪ್ರತಿವಾದಿಯರು ಸೇರಿ 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದು ದಾಖಲೆಯನ್ನು ಹಾಜರುಪಡಿಸಿದ್ದು,

ಉಳಿದ ದಾವಾ ಆಸ್ತಿಗಳಾದ 1, 3 ರಿಂದ 5 ರಆಸ್ತಿಗಳು 1 ಮತ್ತು 6 ನೇ ಪ್ರತಿವಾದಿಯ ಹೆಸರಿನಲ್ಲಿರುವುದನ್ನು ದುರುಪಯೋಗಪಡಿಸಿಕೊಂಡು ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುತ್ತಾರೆಂದು ತಿಳಿಸಿ, ತಮ್ಮ ವಾದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. 1, 3 ರಿಂದ 5 ರ ಆಸ್ತಿಗಳು 1 ಮತ್ತು 6 ನೇ ಪ್ರತಿವಾದಿಯ ಹೆಸರಿನಲ್ಲಿರುವುದನ್ನು ಅಂತಿಮವಾಗಿ ತೀರ್ಮಾನವಾಗುವವರೆಗೆ, ಬೇರೆಯವರಿಗೆ ಪರಭಾರೆ ಮಾಡಿದರೆ ವಾದಿಯರಿಗೆ ತುಂಬಲಾರದ ನಷ್ಟವುಂಟಾಗುತ್ತದೆ ಎಂದು ಅಭಿಪ್ರಾಯಕ್ಕೆ ಬಂದು ಉಭಯ ಪಕ್ಷಗಾರರ ಸಂಗತಿಗಳನ್ನು ತುಲನಾತ್ಮಕವಾಗಿ ನೋಡಿದಾಗ, ಅಂಶ -2 ರಲ್ಲಿ ತಿಳಿಸಿದ ಕಾರಣದಿಂದಾಗಿ ಈ ದಾವೆಯ ಅನುಕೂಲತೆ ಒಲವು ವಾದಿಯರ ಪರ ಭಾಗಶಃವಾಗಿರುತ್ತದೆ ಎಂದು ಸ್ಪಷ್ಟವಾಗುತ್ತದೆ. ಈ ಅರ್ಜಿಯನ್ನು ಪುರಸ್ಕರಿಸದಿದ್ದರೆ ಪ್ರತಿವಾದಿಗಳಿಗೆ ನಷ್ಟ ಆಗುವುದಕ್ಕಿಂತ ವಾದಿಯರಿಗೆ ಹೆಚ್ಚಿನ ಪ್ರಮಾಣದಲ್ಲಿ ನಷ್ಟ ಉಂಟಾಗುತ್ತದೆ ಎನ್ನುವ ಅಭಿಪ್ರಾಯಕ್ಕೆ ಬಂದು **ಅಂಶ ಸಂಖ್ಯೆ 3 ನ್ನು ಭಾಗಶಃ ಸಕಾರಾತ್ಮಕವಾಗಿ** ಉತ್ತರಿಸುತ್ತದೆ.

**15. <u>ಅಂಶ ಸಂಖ್ಯೆ 4</u>:-** ಮೇಲ್ಕಂಡ ಕಾರಣಗಳಿಗೆ ಈ ಮುಂದಿನಂತೆ ಆದೇಶಿಸಲಾಗಿದೆ.

**:: <u>ಆದೇಶ</u> ::**

ವಾದಿಯರು/ಅರ್ಜಿದಾರರುಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಭಾಗಶಃ ಪುರಸ್ಕರಿಸಲಾಗಿದೆ.

ದಾವಾ ಷೆಡ್ಯೂಲ್ ಐಟಂ ನಂ. -1, 3 ರಿಂದ 5 ರ ಸ್ವತ್ತುಗಳನ್ನು 1 ಮತ್ತು 6 ನೇ ಪ್ರತಿವಾದಿಯರು ಈ ದಾವಾ ಅಂತಿಮವಾಗಿ ಇತ್ಯರ್ಥವಾಗುವವರೆಗೆ, ಯಾವುದೇ ವ್ಯಕ್ತಿಗೆ ಅಥವಾ ಸಂಘಕ್ಕೆ ಆಧಾರ ಅಥವಾ ಪರಭಾರೆ ಮಾಡದಂತೆ

ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ಮಂಜೂರು ಮಾಡಲಾಗಿರುತ್ತದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

**(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 18 ನೇ ಜುಲೈ 2023 ರಂದು ಉದ್ಘೋಷಿಸಲಾಯಿತು)**

ಸಹಿ-

(ಸವಿತರಾಣಿ ಹೆಚ್.ವಿ.)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಕಡೂರು.